O.S. 6/2015
ಪಿ.ಡಬ್ಲೂ-1

**ಸಾಕ್ಷಿಯನ್ನು ದಿನಾಂಕಃ 01-10-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು 1 ನೇ ಪ್ರತಿವಾದಿ ಪರ ವಕೀಲರವರಿಂದಃ**

ನನ್ನ ಹೆಸರು ಕೇವಲ ಮಾರ್ಕಂಡೇಶ ಎಂದು ಇದ್ದು ಬಿ.ಮಾರ್ಕಂಡೇಶ ಎಂದು ಇರುವುದಿಲ್ಲ. ನಮ್ಮ ಮನೆತನಕ್ಕೆ ಚಿಗರಿ ಹನುಮಪ್ಪ ಎಂದು ಕರೆಯುವರು. 1996 ರಲ್ಲಿ ನನಗೆ 8-9 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಆ ಸಮಯದಲ್ಲಿ ನನ್ನ ತಮ್ಮನಾದ 2 ನೇ ವಾದಿಗೆ 6-7 ವರ್ಷ ವಯಸ್ಸಾಗಿತ್ತು ಎಂದರೆ ಸರಿ. 1 ನೇ ಪ್ರತಿವಾದಿ ಸಾವಿತ್ರಮ್ಮ ನನ್ನ ಹಿರಿಯ ಸಹೋದರನಾದ ಹಾಲಪ್ಪನ ಹೆಂಡತಿ ಎಂದರೆ ಸರಿ. 1 ನೇ ಪ್ರತಿವಾದಿ ಸಾವಿತ್ರಮ್ಮರಿಗೆ ಈಗ 60 ವರ್ಷ ವಯಸ್ಸಾಗಿರಬಹುದು ಎಂದರೆ ಇರಬಹುದು. ವಂಶವೃಕ್ಷದಲ್ಲಿ ನಾನು ಕಾಣಿಸಿರುವ ನನ್ನ ಅಕ್ಕನಾದ ಹಾಲವ್ವಳಿಗೆ ಗಂಡ ಹಾಗೂ ಮಕ್ಕಳು ಇರುವರು ಎಂದರೆ ಸರಿ. ಆಕೆಯ ಗಂಡನ ಹೆಸರು ದುರುಗಪ್ಪ ಎಂದರೆ ಸರಿ. ಆಕೆಗೆ ಮರಿಯಮ್ಮ ಹಾಗೂ ನೇತ್ರಾ ಎಂಬ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ಆಕೆಗೆ ಚಂದ್ರಪ್ಪ, ಚಿಕ್ಕಪ್ಪ ಮತ್ತು ರಮೇಶ ಎಂಬ ಮೂರು ಜನ ಗಂಡು ಮಕ್ಕಳು ಎಂದರೆ ಸರಿ.

ಹಾಲವ್ವ ಮತ್ತು ಆಕೆಯ ಗಂಡನಾದ ದುರುಗಪ್ಪ ಮೃತರಾಗಿದ್ದು ಆಕೆಯ ಮಕ್ಕಳು ಜೀವಂತವಿರುವರು ಎಂದರೆ ಸರಿ. ನನ್ನ ಅಣ್ಣನಾದ ಹಾಲಪ್ಪನನ್ನು ವಾಡಿಕೆಯ ಪ್ರಕಾರ ಹಾಲೇಶ ಎಂದು ಕರೆಯುತ್ತಿದ್ದರು ಎಂದರೆ ಸರಿ. ಸದರಿ ನನ್ನ ಸಹೋದರನಿಗೆ 1 ನೇ ಪ್ರತಿವಾದಿಯಾದ ಸಾವಿತ್ರನ ಮೂಲಕ ಒಬ್ಬ ಮಗ ವೆಂಕಟೇಶ ಎಂಬಾತನು ಮತ್ತು ಇಬ್ಬರು ಹೆಣ್ಣು ಮಕ್ಕಳಾದ ಸುಮಿತ್ರ ಮತ್ತು ನಾಗವೇಣಿ ಈಗಲೂ ಜೀವಂತ ಇರುವರು ಎಂದರೆ ಸರಿ. ನನ್ನ ತಂದೆಯಾದ ಹನುಮಪ್ಪನ ತಂದೆ ಹೆಸರು ತಿಮ್ಮಪ್ಪ ಎಂದು ಇರುವುದು. ನನ್ನ ಅಜ್ಜನಾದ ತಿಮ್ಮಪ್ಪನಿಗೆ ನನ್ನ ತಂದೆ ಹನುಮಪ್ಪ ಮಗನಾಗಿದ್ದು ಅದರೊಂದಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದರು. ಅವರ ಹೆಸರು ನನಗೆ ಗೊತ್ತಿಲ್ಲ. ನನಗೆ ನನ್ನ ಅಜ್ಜನಾದ ತಿಮ್ಮಪ್ಪನ ಒಡಹುಟ್ಟಿದವರ ಕುರಿತು ಮಾಹಿತಿ ಇರುವುದಿಲ್ಲ.

ನನ್ನ ಅಜ್ಜನಾದ ತಿಮ್ಮಪ್ಪನಿಗೆ ಪಿತ್ರಾರ್ಜಿತವಾಗಿ ಯಾವುದೇ ಆಸ್ತಿ ಬಂದಿರಲಿಲ್ಲ ಎಂದರೆ ಸರಿ. ದಾವಾ ಆಸ್ತಿ ಜಂಟಿ ಕುಟುಂಬದ ಆಸ್ತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ಪ್ರತಿವಾದಿಗಳು ಅವಿಭಕ್ತ ಕುಟುಂಬದ ಸದಸ್ಯರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಜಂಟಿ ಕುಟುಂಬದ ಆದಾಯದಿಂದ 1 ನೇ ಪ್ರತಿವಾದಿಯ ಗಂಡನ ಹೆಸರಿಗೆ ಖರೀದಿ ಮಾಡಲಾಗಿತ್ತು ಎಂಬ ವಿಚಾರ ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿ ಖರೀದಿ ಆಗುವ ಕಾಲಕ್ಕೆ ವಾದಿಗಳಾದ ನಾವು ಅಪ್ರಾಪ್ತ ವಯಸ್ಕರಾಗಿದ್ದು ಅವಲಂಬಿತರಾಗಿ ಜೀವನ ನಡೆಸುತ್ತಿದ್ದ ಕಾರಣ ನಮಗೆ ಆ ಕಾಲಕ್ಕೆ ಯಾವುದೇ ವೈಯಕ್ತಿಕ ದುಡಿಮೆ ಇರಲಿಲ್ಲ ಎಂದರೆ ಸರಿಯಲ್ಲ. ನಾವು

ಬೇಸಾಯದಲ್ಲಿ ತೊಡಗಿದ್ದೆವು. ಆ ಸಮಯದಲ್ಲಿ ನಾವು ಯಾವುದೇ ಕೆಲಸವನ್ನು ಮಾಡಲು ಸಮರ್ಥರಾಗಿರುವುದಿಲ್ಲ ಎಂದರೆ ಸರಿಯಲ್ಲ.

1996ರಲ್ಲಿ ನಡೆದ ಖರೀದಿ ವ್ಯವಹಾರದ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 1996 ರಲ್ಲಿ ರೂ.20,000/-ಕ್ಕೆ ಹನುಮಪ್ಪ ಇವರಿಂದ ಖರೀದಿ ಮಾಡಲಾಗಿತ್ತು. ಖರೀದಿಯಾದ ದಿನಾಂಕ ಮತ್ತು ತಿಂಗಳು ನನಗೆ ನೆನಪಿಲ್ಲ. 1996ರಲ್ಲಿ ನಮ್ಮ ಅವಿಭಕ್ತ ಕುಟುಂಬಕ್ಕೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮ್ಮ ಹಾಗೂ ಪ್ರತಿವಾದಿಯರ ಜಂಟಿ ಸ್ವಾಧೀನದಲ್ಲಿರುವುದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಮೂರು ಮನೆಗಳು ಕೂಡ 1ನೇ ಪ್ರತಿವಾದಿಯ ಸ್ವಾಧೀನದಲ್ಲಿವೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಯಾವಾಗ ಖಣದಿಂದ ವಾಸ ಯೋಗ್ಯ ಎಂದು ಪರಿಗಣಿಸಲ್ಪಟ್ಟಿತ್ತು ಎಂದು ನನಗೆ ಗೊತ್ತಿಲ್ಲ.

1ನೇ ಪ್ರತಿವಾದಿಯ ಗಂಡನಾದ ಹಾಲೇಶ್‌ರವರು 2008ರಲ್ಲಿ ಮೃತಪಟ್ಟರು ಎಂದರೆ ಸರಿ. ಅವರು ಮೃತಪಟ್ಟ ನಂತರ 1ನೇ ಪ್ರತಿವಾದಿ ಹಾಗೂ ಅವರ ಮಕ್ಕಳ ಹೆಸರಿಗೆ ವಾರಸು ನೆಲೆಯಲ್ಲಿ ಹಕ್ಕು ವರ್ಗಾವಣೆಯಾಗಿರುತ್ತದೆ ಎಂದರೆ ಸುಳ್ಳು. ನನ್ನ ಸಹೋದರನಾದ ಹಾಲೇಶನ್ನು ತನ್ನ 16ನೇ ವಯಸ್ಸಿನಲ್ಲಿ ತಂದೆ-ತಾಯಿ ಹಾಗೂ ಮನೆಯನ್ನು ಬಿಟ್ಟು ಹೋಗಿರುವರು ಎಂದರೆ ಸುಳ್ಳು. ತದನಂತರ ಆತ ತನ್ನ ವೈಯಕ್ತಿಕ ನೆಲೆಯಲ್ಲಿ ಆತ ಜೀವನ ನಡೆಸುತ್ತಿದ್ದರು ಎಂದರೆ ಸುಳ್ಳು. ಅವರು ತನ್ನ 21ನೇ ವಯಸ್ಸಿನಲ್ಲಿ ಮೆಣಸಿನಕಾಯಿ ಹೋಲ್ ಸೇಲ್ ವ್ಯಾಪಾರವನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. 1991ರಲ್ಲಿ ಹಾಲೇಶನು ರೇಣುಕಮ್ಮನನ್ನು ವಿವಾಹವಾಗಿದ್ದರು ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

01.10.2024

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**